# <u>ನಗರಸಭೆ, ಚಿಕ್ಕಮಗಳೂರು.</u>

ಸಿ.ಎಂ.ಸಿ./ಸಿಕೆಎಂ/ನಿನಯೋ–85/2006-07 ದಿನಾಂಕ: 12/07/2006

**<u>ಸಾರ್ವಜನಿಕ ಪ್ರಕಟಣೆ</u>**

ಚಿಕ್ಕಮಗಳೂರು ನಗರದಲ್ಲಿ ನಿರ್ಮಲನಗರ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು ಘನತ್ಯಾಜ್ಯ ವಸ್ತುಗಳ (ಕಸ ನಿರ್ವಹಣೆ) ಸಮರ್ಪಕ ನಿರ್ವಹಣೆ ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಆದುದರಿಂದ ನಗರದ ನೈರ್ಮಲ್ಯ ವ್ಯವಸ್ಥೆಯನ್ನು ಸಮರ್ಪಕವಾಗಿ ಕಾಪಾಡಲು ನಾಗರಿಕರು ಈ ಕೆಳಕಂಡ ಅಂಶಗಳನ್ನು ತಪ್ಪದೇ ಪಾಲಿಸಲು ಕೋರಿದೆ.

**1) ಎಲ್ಲಾ ಮನೆಯ ಸಾರ್ವಜನಿಕರು ಪ್ರತಿದಿನ ತಮ್ಮ ಮನೆಯ ಬಾಗಿಲಿಗೆ ಬರುವ ನಗರಸಭೆಯ/ಸ್ವಚ್ಛ ಟ್ರಸ್ಟ್‌ನ ಗಾಡಿಗಳಿಗೆ ಕಸವನ್ನು ತಪ್ಪದೇ ನೀಡಬೇಕು. ಹಾಗೂ ಈ ಸಂಬಂದ ಮಾಸಿಕ ಸೇವಾ ಶುಲ್ಕ** ರೂ 15 ನ್ನು ಪಾವತಿಸಬೇಕು.

**2) ಎಲ್ಲಾ ಅಂಗಡಿ ಮಾಲಿಕರು/ಉದ್ದಿಮೆದಾರರು ತಮ್ಮ ಉದ್ದಿಮೆ ಸ್ಥಳದ ಕಸವನ್ನು ನಗರಸಭೆ/ಸ್ವಚ್ಛ ಟ್ರಸ್ಟ್‌ನ ಗಾಡಿಗಳಿಗೆ ನೀಡಬೇಕು. ಈ ಸಂಬಂದ ಮಾಸಿಕ ಸೇವಾ ಶುಲ್ಕ ರೂ 30 ನ್ನು ಪಾವತಿಸಬೇಕು.**

**3) ಸಾಕು ಪ್ರಾಣಿಗಳಾದ ಹಂದಿ, ನಾಯಿ, ದನಗಳನ್ನು ಸಾರ್ವಜನಿಕ ರಸ್ತೆ/ಸ್ಥಳಗಳಿಗೆ ಬಿಡಬಾರದು.**

**4) ಪ್ರತಿ ಅಂಗಡಿಯಲ್ಲಿ ಕಸದ ಬುಟ್ಟಿಯನ್ನು ಕಡ್ಡಾಯವಾಗಿ ಅಂಗಡಿಯ ಮುಂದೆ ಇಡಬೇಕು.**

**5) ಮನೆ ಕೆಡವಿದ ಇಟ್ಟಿಗೆ, ಮಣ್ಣು ಇತ್ಯಾದಿಗಳನ್ನು ನಗರದ ರಸ್ತೆ ಬದಿಗಳಲ್ಲಿ ಹಾಕಬಾರದು. ನಗರಸಭೆಯ ವ್ಯಾಪ್ತಿಯಿಂದ ಹೊರಗಡೆ ಸಾಗಿಸಬೇಕು.**

**6) ಪ್ಲಾಸ್ಟಿಕ್ (20 ಮೈಕ್ರಾನ್‌ಗಿಂತ ಕಡೆಮೆ ಗಾತ್ರದ) ಕೈ ಚೀಲಗಳನ್ನು ಅಂಗಡಿ, ಹೋಟೆಲ್, ಕೈಗಾಡಿ ಮತ್ತು ಮನೆಗಳಲ್ಲಿ ಬಳಸಬಾರದು.**

**7) ಪ್ಲಾಸ್ಟಿಕ್ ಚೀಲಗಳನ್ನು ರಸ್ತೆ ಚರಂಡಿಗಳಿಗೆ ಎಸೆಯಬಾರದು.**

**8) ಸಾರ್ವಜನಿಕರು ಮೇಲಿನ ಎಲ್ಲಾ ಅಂಶಗಳನ್ನು ತಪ್ಪದೇ ಪಾಲಿಸುವುದು, ತಪ್ಪಿದಲ್ಲಿ ನಗರಸಭಾ ಕಾಯಿದೆ 1964 ರ ಪ್ರಕಾರ ದಂಡ ವಿಧಿಸಲಾಗುವುದು.**

**ಸಾರ್ವಜನಿಕರು ಮೇಲ್ಕಂಡ ಅಂಶಗಳಿಗೆ ಸ್ಪಂದಿಸಿ ಚಿಕ್ಕಮಗಳೂರು ನಗರವನ್ನು ನಿರ್ಮಲ, ಸ್ವಚ್ಛ ಹಾಗೂ ಸುಂದರ ಮಾದರಿ ನಗರವನ್ನಾಗಿ ಮಾಡಲು ಸಹಕರಿಸಿ.**

**ಪ್ಲಾಸ್ಟಿಟ್ ತ್ಯಜಿಸಿ – ಪರಿಸರ ಉಳಿಸಿ.**
ಪರಿಸರದಿಂದ ಪರಿವಾರ ಆರೋಗ್ಯ, ಪರಿಹಾರ ನಿಮ್ಮ ಕೈಯಲ್ಲಿದೆ,
ನಮ್ಮ ಮನೆ – ನಮ್ಮ ನಗರ – ಸ್ವಚ್ಛವಾಗಿರಲಿ.

**ಸಹಿ/–**
**ಆಡಳಿತಾಧಿಕಾರಿಗಳು,**
**ನಗರಸಭೆ,ಚಿಕ್ಕಮಗಳೂರು.**

**ಸಹಿ/–**
**ಪೌರಾಯುಕ್ತರು,**
**ನಗರಸಭೆ, ಚಿಕ್ಕಮಗಳೂರು.**

PDF Created with deskPDF PDF Writer - Trial :: http://www.docudesk.com